ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 24/06/2020

# ಶಾಸಕರ ಭವನಕ್ಕೂ ಕೊರೊನಾ ಲಗ್ಗೆ

**ಬೆಂಗಳೂರು:** ಮಹಾಮಾರಿ ಕೊರೊನಾ ತನ್ನ ಕಬಂದ ಬಾಹುವನ್ನು ಎಲ್ಲೆಡೆ ವಿಸ್ತರಿಸುತ್ತಿದ್ದು ಶಾಸಕರ ಭವನಕ್ಕೂ ದಾಂಗುಡಿ ಇಟ್ಟಿದೆ. ಶಾಸಕರ ಭವನದಲ್ಲಿ ಶಾಸಕರ ವಾಹನಗಳನ್ನು ತೊಳೆಯುತ್ತಿದ್ದ ವ್ಯಕ್ತಿಯೊಬ್ಬರಿಗೆ ಕೊರೊನಾ ಸೋಂಕು ಇರುವುದು ದೃಢಪಟ್ಟಿದ್ದು, ಈತನನ್ನು ಸರ್ಕಾರದ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ.

ಹಲವು ದಿನಗಳಿಂದ ಈ ವ್ಯಕ್ತಿ ನಿರಂತರವಾಗಿ ಶಾಸಕರ ಭವನಕ್ಕೆ ಬಂದು ಅಲ್ಲಿ ಸೂಚಿಸಿದ ವಾಹನಗಳನ್ನು ಸ್ವಚ್ಛಗೊಳಿಸುತ್ತಿದ್ದ. ಈಗ ಆತನಿಗೆ, ಕೊರೊನಾ ಸೋಂಕು ಆವರಿಸಿರುವುದರಿಂದ ಶಾಸಕರ ಭವನದಲ್ಲಿರುವ ಸಿಬ್ಬಂದಿಗೆ ಆತಂಕ ಶುರುವಾಗಿದೆ.